ರಾಮು



# ಜೀವದಾಯಿನಿ...

ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ದನಿ ವಿಶಿಷ್ಟವಾದುದು. ಕಥೆ, ಕಾದಂಬರಿ, ಕಾವ್ಯ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ಲೇಖಕಿಯರು ತಮ್ಮ ಹೆಜ್ಜೆ ಗುರುತುಗಳನ್ನು ಸ್ಪಷ್ಟವಾಗಿ ಮೂಡಿಸಿದ್ದಾರೆ. ಮಹಿಳಾ ಸಾಹಿತ್ಯಕ್ಕೆ ನಾಂದಿ ಇಟ್ಟ ನಂಜನಗೂಡು ತಿರುಮಲಾಂಬ ಅವರಿಂದ ಇವತ್ತಿನವರೆಗಿನ ಅನೇಕ ಬರಹಗಾರ್ತಿಯರು ಮಹಿಳಾ ಸಾಹಿತ್ಯ ಪರಂಪರೆಯನ್ನು ವಿಸ್ತರಿಸಿದ್ದಾರೆ. ಈಗ ಮಹಿಳೆಯ ಅನುಭವ ಸೀಮೆಗಳು ಹಿಗ್ಗಿವೆ. ಆಧುನಿಕ ಬದುಕಿನ ಹೊಸ ಸಂವೇದನೆ ಹೊಸ ತಲೆಮಾರಿನ ಲೇಖಕಿಯರಲ್ಲಿ ಅಭಿವ್ಯಕ್ತಿ ಪಡೆಯುತ್ತಿದೆ.

ಮಾರ್ಚ್ 8, ಮಹಿಳಾ ದಿನ. ಅಂತರರಾಷ್ಟ್ರೀಯ ಮಹಿಳಾ ದಿನ ಆಚರಣೆಗೆ ಈಗ ನೂರರ ಸಂಭ್ರಮ. ಈ ದಿನದ ಶತಮಾನದ ಕಥೆಯೊಂದಿಗೆ ಸ್ತ್ರೀ ಸಂವೇದನೆಗಳ ಅಭಿವ್ಯಕ್ತಿಗೆ ಈ ಸಂಚಿಕೆ ವೇದಿಕೆಯಾಗಿದೆ. ಇಲ್ಲಿನ ಕಥೆ, ಕಾವ್ಯ, ಲೇಖನಗಳು ಸ್ತ್ರೀ ಕೇಂದ್ರಿತವಾಗಿವೆ. ಪಂಡಿತ್ ಭೀಮಸೇನ ಜೋಷಿ ಅವರ ಅಗಲಿಕೆಯಿಂದ ಹಿಂದುಸ್ತಾನಿ ಸಂಗೀತ ಲೋಕ ಬಡವಾಗಿದೆ. ಈ ರಾಗಋಷಿಗೆ ಸಂಗೀತಪ್ರೇಮಿಗಳ ಪರವಾಗಿ 'ಮಯೂರ' ನುಡಿನಮನ ಸಲ್ಲಿಸಿದೆ.

–ಸಂಪಾದಕ